# ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು – 560 023.

**ದಿನಾಂಕ: 15–08–2025**

## ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ

## ಸಚಿತ್ರಗಳ ಪಕ್ಷಿ ನೋಟ

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮವನ್ನು ಈ ಕೆಳಕಂಡ ಕಾರ್ಯಕ್ರಮದಂತೆ ಸಂಘದ ಧ್ವಜ ಸ್ಥಂಭದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.



ಕಾರ್ಯಕ್ರಮಗಳ ಪಟ್ಟಿ

ದಿನಾಂಕ: 15-08-2025 - ಶುಕ್ರವಾರ

ನಿರೂಪಣೆ : ಶ್ರೀ ಎ. ಶ್ರೀನಿವಾಸಮೂರ್ತಿ, ಕಾರ್ಯಕಾರೀ ಸಮಿತಿ ಸದಸ್ಯರವರಿಂದ

ಧ್ವಜಸ್ತಂಭ ಪೂಜೆ : ಬೆಳಿಗ್ಗೆ 08-55 ಗಂಟೆ

ಧ್ವಜಾರೋಹಣ : ಶ್ರೀ ಕೆ.ಬಿ. ಚೆಟ್ಟೇಗೌಡ, ಅಧ್ಯಕ್ಷರವರಿಂದ
ಸಮೂಹ ರಾಷ್ಟ್ರಗೀತೆ - ಧ್ವನಿ ಮುದ್ರಿಕೆಯೊಂದಿಗೆ ಎಲ್ಲರೂ ಸ್ವರ ಸೇರಿಸುವುದು

ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿ: ಶ್ರೀ ಎಮ್. ಶಂಕರಪ್ಪ, ಕಾರ್ಯದರ್ಶಿಯವರಿಂದ

ಹಿರಿಯ ಸದಸ್ಯರ ಭಾಷಣ:
1) ಶ್ರೀ ಬಿ.ಬಿ. ಅಶೋಕ್ ಕುಮಾರ್, ಹಿರಿಯ ಸದಸ್ಯರವರಿಂದ
2) ಶ್ರೀ ಎಮ್. ಎ. ಶೇಷನ್, ಉಪಾಧ್ಯಕ್ಷರವರಿಂದ

ಅಧ್ಯಕ್ಷೀಯ ಭಾಷಣ : ಶ್ರೀ ಕೆ.ಬಿ. ಚೆಟ್ಟೇಗೌಡ, ಅಧ್ಯಕ್ಷರವರಿಂದ

ವಂದನಾರ್ಪಣೆ : ಶ್ರೀ ಕೆ.ಸಿ.ವಿ. ಮಾನೆ, ವಲಯ ಸಂಘಟನಾ ಕಾರ್ಯದರ್ಶಿಯವರಿಂದ

ಕಾರ್ಯಕ್ರಮದ ನಂತರ ಲಘು ಉಪಹಾರ

ವಿಶೇಷ ಸೂಚನೆ: ಎಲ್ಲ ಸದಸ್ಯರುಗಳು ಬೆಳಿಗ್ಗೆ 08-50 ಗಂಟೆಗೆ ಸಂಘದ ಆವರಣದಲ್ಲಿರುವ ಧ್ವಜ ಸ್ತಂಭದ ಬಳಿ ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಕೋರಿಕೆ.

ಸಂಘದ ಧ್ವಜ ಸ್ಥಂಭದ ಆವರಣದಲ್ಲಿ ರಾಷ್ಟ್ರಪಿತ ಹಾಗೂ ಸಂವಿಧಾನ ಶಿಲ್ಪಿ ರವರುಗಳ ಭಾವ ಚಿತ್ರಗಳಿಗೆ ಧ್ವಜ ಸ್ಥಂಭದ ಬಳಿ ಪೂಜಾ ನಮನ ಸಲ್ಲಿಸಲಾಯಿತು.



ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ
ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು – 560 023

ಆಮಂತ್ರಣ ಪತ್ರಿಕೆ

ಸ್ವಾತಂತ್ರ್ಯ ದಿನಾಚರಣೆ

ದಿನಾಂಕ: 15-08-2025 – ಶುಕ್ರವಾರ

ತ್ರಿವರ್ಣ ಧ್ವಜಾರೋಹಣ ಕಾರ್ಯಕ್ರಮವನ್ನು
ಸಂಘದ ಧ್ವಜ ಸ್ತಂಭದ ಬಳಿ ಹಮ್ಮಿಕೊಳ್ಳಲಾಗಿದೆ.

ತಾವುಗಳೆಲ್ಲರೂ ಸಕಾಲಕ್ಕೆ ಆಗಮಿಸಿ ಕಾರ್ಯಕ್ರಮವನ್ನು
ಯಶಸ್ವಿಗೊಳಿಸಬೇಕಾಗಿ ಎಲ್ಲ ಗೌರವಾನ್ವಿತ ಸದಸ್ಯರಲ್ಲಿ ಕೋರಿಕೆ.

ಅಧ್ಯಕ್ಷರು ಮತ್ತು ಪದಾಧಿಕಾರಿಗಳು

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮವನ್ನು ದಿನಾಂಕ: 15–08–2025 ರಂದು ಶುಕ್ರವಾರದ ಬೆಳಿಗ್ಗೆ 09–00 ಗಂಟೆಯಿಂದ ಸಂಘದ ಧ್ವಜ ಸ್ಥಂಭದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.



ಸಂಘದ ಪದಾಧಿಕಾರಿಗಳು, ಹಿರಿಯ/ಕಿರಿಯ ಸದಸ್ಯರೊಂದಿಗೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಸಂವಿಧಾನ ಶಿಲ್ಪಿ ಡಾ॥ ಬಿ. ಆರ್. ಅಂಬೇಡ್ಕರ್ ರವರುಗಳ ಭಾವ ಚಿತ್ರಕ್ಕೆ ಧ್ವಜಾರೋಹಣಕ್ಕೆ ಮುನ್ನ ಪೂಜೆ ಸಲ್ಲಿಸಿ ದೀಪ ಬೆಳಗಿಸಲಾಯಿತು.







ಫೋಟೋ ಪೂಜೆ ಹಾಗೂ ಜ್ಯೋತಿ ಬೆಳಗಿಸಿದ ನಂತರ ಸಂಘದ ಅಧ್ಯಕ್ಷರಾದ ಶ್ರೀ ಕೆ. ಬಿ. ಬೆಟ್ಟೇಗೌಡರವರು ರಾಷ್ಟ್ರ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿದರು. ನೆರೆದಿದ್ದ ಹಿರಿಯ/ಕಿರಿಯ ಸದಸ್ಯರು ಹಾಗೂ ಇತರರೂ ಸಹ ಧ್ವಜಕ್ಕೆ ವಂದನೆ ಸಲ್ಲಿಸಿ ಧ್ವನಿಮುದ್ರಣದ ಹಿನ್ನೆಲೆಯೊಂದಿಗೆ ಎಲ್ಲರೂ ರಾಷ್ಟ್ರಗೀತೆ ಹಾಡಿರುತ್ತಾರೆ.

















ಸಂಘದ ಕಾರ್ಯದರ್ಶಿಯವರಾದ ಶ್ರೀ ಎಮ್. ಶಂಕರಪ್ಪ ರವರು ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದ ಹಿರಿಯ ಸದಸ್ಯರೊಂದಿಗೆ ಎಲ್ಲರನ್ನೂ ಸ್ವಾಗತಿಸಿ ತಮ್ಮ ಪ್ರಾಸ್ತಾವಿಕ ನುಡಿಯನ್ನು ಪ್ರಸಕ್ತ ಸ್ಥಿತಿಯ ಜ್ವಲಂತ ವಸ್ತು ಸ್ಥಿತಿಯ ಬಗ್ಗೆ ಚುಟುಕಾಗಿ ಪ್ರಸ್ತುತಪಡಿಸಿದರು.






ಸಂಘದ ಹಿರಿಯ ಸದಸ್ಯರಾದ ಶ್ರೀ ಬಿ.ಬಿ. ಅಶೋಕ್ ಕುಮಾರ್ ರವರು ಸೇನಾ ಯೋಧರ ಬಗ್ಗೆ ಮೈನವಿರೇಳುವಂತೆಯೂ ಹಾಗೂ ಪ್ರಸ್ತುತ ಸಾಮಾಜಿಕ ಸ್ಥಿತಿಯಲ್ಲಿ ಜನ ಸಾಮಾನ್ಯರ ಚಿಂತನೆಗಳು ಹಾಗೂ ನಿವೃತ್ತ ಸದಸ್ಯರೆಲ್ಲರೂ ಆರೋಗ್ಯ ಕಾಪಾಡಿಕೊಂಡು ಸದೃಢವಾಗಿರುವಂತೆಯೂ ತಮ್ಮ ಭಾಷಣದಲ್ಲಿ ತಿಳಿಸಿ, ತಮ್ಮ ಸೇವಾವಧಿಯಲ್ಲಿ ಕಂಡು ಬಂದ ಉದಾಹರಣೆಗಳನ್ನು ಪ್ರಸ್ತುತ ಪಡಿಸಿ ದೇಶ ಪ್ರೇಮದ ಬಗ್ಗೆ ಒತ್ತಿ ಹೇಳಿದರು.





ಈ ಸಮಾರಂಭದ ರೂವಾರಿ ಹಾಗೂ ಸಂಘದ ಅಧ್ಯಕ್ಷರಾದ ಶ್ರೀ ಕೆ.ಬಿ. ಬೆಟ್ಟೇಗೌಡ ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ದೇಶ ಪ್ರೇಮದ ಬಗ್ಗೆ ಮಾತನಾಡಿದರು.







ಶ್ರೀ ಕೆ.ಸಿ.ವಿ. ಮಾನೆ ರವರು ಕಾರ್ಯಕ್ರಮದ ಸಮಾರಂಭದಲ್ಲಿ ಕೊನೆಯಲ್ಲಿ ಎಲ್ಲರಿಗೂ ವಂದನಾರ್ಪಣೆಯನ್ನು ಸಲ್ಲಿಸಿದರು.



ಸಂಘದ ಕಾರ್ಯಕಾರೀ ಸಮಿತಿಯ ಸದಸ್ಯರಾದ ಶ್ರೀ ವಿ. ಶ್ರೀನಿವಾಸ ಮೂರ್ತಿ ರವರು ಧ್ವಜಾರೋಹಣಾ ಕಾರ್ಯಕ್ರಮದ ನಿರೂಪಣಾ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.



































**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಎಲ್ಲರಿಗೂ ವ್ಯವಸ್ಥೆ ಮಾಡಲಾಗಿದ್ದ ಲಘು ಉಪಾಹಾರ ದೊಂದಿಗೆ ಕಾರ್ಯಕ್ರಮ ಸಂಪೂರ್ಣ ವಾಗಿರುತ್ತದೆ.**

**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು – 560 023.**

* * * * *